**ಸಾಕ್ಷಿಯನ್ನು ದಿನಾಂಕ: 30-07-2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಈ ದಿನ ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ವಕೀಲರು ನನಗೆ ಓದಿ ತಿಳಿಸಿರುತ್ತಾರೆ. ಆದ್ದರಿಂದ, ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆ ಎಂದು ಪರಿಗಣಿಸಬೇಕಾಗಿ ಕೋರುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆ :- ಅರ್ಜಿದಾರರ ಪರ ವಕೀಲರಾದ ಶ್ರೀ.ಬಿ. ಚಂದ್ರು ರವರಿಂದಃ**

ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ.

1) ದಾವಾ ಜಮೀನು ನಮ್ಮ ತಂದೆಯಾದ ಪಿ.ಹನುಮಯ್ಯರವರಿಗೆ ಮಂಜೂರಾದ ಬಗ್ಗೆ ಮಂಜೂರಾತಿ ಪತ್ರದ ಮೂಲ ಪ್ರತಿ.
2) ಪ್ರಿಮಿಯಂ ಕಟ್ಟಲು ತಹಶೀಲ್ದಾರರ ಕಛೇರಿಯಿಂದ ಬಂದಿದ್ದ 2 ನೋಟಿಸಗಳು.
3) ಕಂದಾಯ ಕಟ್ಟಿದ 3 ರಶೀದಿಗಳು.
4) ಎರಡು ಪಟ್ಟಾ ಪುಸ್ತಕಗಳು.
5) ಮೂರು ಪಹಣಿ ಪತ್ರಿಕೆಗಳ ದೃಢೀಕೃತ ನಕಲಗಳು.
6) ಎರಡು ಹಕ್ಕು ಬದಲಾವಣೆ ವಹಿಗಳ ದೃಢೀಕೃತ ನಕಲುಗಳು.
7) ಕುಟುಂಬದ ಪಡಿತರ ಚೀಟಿ.
8) ನನ್ನ ಮತ್ತು ನಮ್ಮ ಕುಟುಂಬದ ಇತರೆ ಸದಸ್ಯರ ಹೆಸರಿರುವ ಮತದಾರರ ಪಟ್ಟಿಯ ದೃಢೀಕೃತ ನಕಲು.
9) ನಮ್ಮ ತಂದೆ ಕಾಣೆಯಾದ ಬಗ್ಗೆ ದೂರು ನೀಡಿದ್ದು, ಅದರ ಪ್ರಥಮ ವರ್ತಮಾನದ ದೃಢೀಕೃತ ನಕಲು.
10) ದಿನಪತ್ರಿಕೆಗಳಲ್ಲಿ ಜಾಹಿರಾತು ನೀಡಿದ ಬಗ್ಗೆ ಎರಡು ದಿನಪತ್ರಿಕೆಗಳ ದೃಢೀಕೃತ ನಕಲುಗಳು.

11) ಕರ್ನಾಟಕ ರಾಜ್ಯ ಸರ್ಕಾರ ಮತ್ತು ಸುಬ್ರಮಣ್ಯ ನಗರ ಪೋಲಿಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಮತ್ತು ಬೆಂಗಳೂರು ಮಹಾನಗರ ಪಾಲಿಕೆಗೆ ನೋಟಿಸ್ ನೀಡಿದ ಬಗ್ಗೆ ನೋಟಿಸಿನ ದೃಢೀಕೃತ ನಕಲು ಮತ್ತು ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿ ಪತ್ರದ ದೃಢೀಕೃತ ನಕಲು.

12) ಪೋಲಿಸರು ನೀಡಿದ್ದ ಹಿಂಬರಹದ ದೃಢೀಕೃತ ನಕಲು.

13) ನಮ್ಮ ತಂದೆಯ ವಿವಾಹದ ಆಮಂತ್ರಣ ಪತ್ರಿಕೆ.

14) ಅಸಲು ದಾವಾ ಸಂಖ್ಯೆಃ 905/2001 ರ ಆದೇಶ ಪುಟಗಳು, ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲುಗಳು.

15) ನಮ್ಮ ತಂದೆ ಪಿ.ಹನುಮಯ್ಯ ಮತ್ತು ತಾಯಿ ಪುಟ್ಟರಂಗಮ್ಮರ ಮರಣ ಪ್ರಮಾಣ ಪತ್ರಗಳ ದೃಢೀಕೃತ ನಕಲುಗಳು ಹಾಜರು ಮಾಡಿರುತ್ತೇನೆ.

ಎಲ್ಲಾ ದಾಖಲೆಗಳನ್ನು ಕ್ರಮವಾಗಿ ನಿಪಿ-**1** ರಿಂದ ನಿಪಿ-**27** ಎಂದು ಗುರುತಿಸಲಾಯಿತು**.**

**(ಅರ್ಜಿದಾರರ ಪರ ವಕೀಲರು ದಾಖಲೆಗಳನ್ನು ನಿಶಾನೆಗಳನ್ನಾಗಿ ಗುರುತಿಸಿಕೊಳ್ಳಲು ಕಾಲಾವಕಾಶ ಕೋರಿದ್ದರಿಂದ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ.**